ಶ್ರೀ ವಾಟಾಳ್ ನಾಗರಾಜ್:- ಸ್ವಾಮಿ ತಪಾಸಣೆ ನಡೆದಿಲ್ಲ, ವೈದ್ಯರು ಒಬ್ಬರೂ ಇಲ್ಲ, ಪಿ.ಹೆಚ್.ಸಿ. ಗಳಲ್ಲಿ ಔಷಧಿ ಇಲ್ಲ, ಇದು ಸಂಪೂರ್ಣವಾಗಿ ಜನರಿಗೆ ಮಾಡಿದಂತಹ ಮೋಸ, ಬರೀ ಮೋಸ, ಇದರಲ್ಲಿ ಏನೂ ಆಗಿಲ್ಲ....

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- ಈ ಕಾರ್ಯಕ್ರಮ ಏನೂ ಆಗಿಲ್ಲ, ಮಾನ್ಯ ಮಂತ್ರಿಗಳು ಅಸಹಾಯಕರಾಗಿದ್ದಾರೆ. ಉತ್ತರ ಕೊಡುವುದಕ್ಕೆ ಆಗುವುದಿಲ್ಲ . ಆದ್ದರಿಂದ ಈ ಸ್ಕೀಮನ್ನು ವಿತ್‌ಡ್ರಾ ಮಾಡುತ್ತೀರಾ?

(ಗೊಂದಲ)

ಅಧ್ಯಕ್ಷರು:- ಆಗಲಿ....

(ಗೊಂದಲ)

ಅಧ್ಯಕ್ಷರು:- ಈ ಪ್ರಶ್ನೆ ಮತ್ತೆ ಸದನದ ಮುಂದೆ ಬರುತ್ತದೆ. 15 ದಿವಸ ಟೈಮ್ ಕೇಳಿದ್ದಾರೆ.

ಶ್ರೀ ಬಿ.ಎಚ್. ಬನ್ನಿಕೋಡ್:- ಮಾನ್ಯ ಅಧ್ಯಕ್ಷರೇ, ಅವರು ತಪ್ಪಿಸಿಕೊಳ್ಳುವುದಕ್ಕೆ ಹೇಳುತ್ತಿದ್ದಾರೆ. ಈ ಸದನದಲ್ಲಿ ಸತ್ಯ ಸಂಗತಿಯನ್ನು ಹೇಳಲಾರದೆ ಈ ಕಾರ್ಯಕ್ರಮವನ್ನು ಜಾರಿ ಮಾಡಿಲ್ಲ....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಈ ಯೋಜನೆಯನ್ನು ಪೂರ್ಣ ಮಾಡುವುದಕ್ಕೆ 200ಕೋಟಿ ರೂಪಾಯಿಗಳು ಬೇಕು. ತಾವು ಇಟ್ಟಿರುವುದು ಒಂದು ಕೋಟಿ ರೂಪಾಯಿಗಳು. ಈಗ ಇರುವ ಆಸ್ಪತ್ರೆಗಳಲ್ಲಿ ಒಳ್ಳೆಯ ಡಾಕ್ಟರ್ಸ್‌ನ್ನು ಹಾಕಿ ಒಳ್ಳೆಯ ಔಷಧಿ ಕೊಟ್ಟರೆ ಸಾಕು. ಯಾರು ಕೇಳಿದ್ದರು ಈ ಅನಗತ್ಯ ಕಾರ್ಯಕ್ರಮವನ್ನು, ಅಗತ್ಯ ಇರತಕ್ಕಂಥ ಕಾರ್ಯಕ್ರಮವನ್ನು ಮಾಡಿ ಕಾರ್ಯರೂಪಕ್ಕೆ ತರದೆ ಇನ್ನೊಂದು ಕಾರ್ಯಕ್ರಮ ಏಕೆ ಬೇಕು. ಇರುವ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ಸರಿಯಾಗಿ ಮಾಡಿ.

ಶ್ರೀ ಬಿ.ಎಚ್. ಬನ್ನಿಕೋಡ್:- ಇರತಕ್ಕಂಥ ಆಸ್ಪತ್ರೆಗಳಲ್ಲಿಯೇ ಔಷಧಿ ಇಲ್ಲ, ಮತ್ತು.....

(ಗೊಂದಲ)

ರಾಜ್ಯದಲ್ಲಿ ಸರ್ಕಾರಿ ವಿದ್ಯಾರ್ಥಿ ನಿಲಯಗಳ ಸಂಖ್ಯೆ

96 (583) ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ರಾಜ್ಯದಲ್ಲಿ ಎಷ್ಟು ಕಾಲೇಜು, ಪ್ರೌಢಶಾಲೆ ಮತ್ತು ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿ ನಿಲಯಗಳು ಇವೆ (ಜಿಲ್ಲಾವಾರು ವಿವರ ನೀಡುವುದು)

ಆ) ಈ ಪೈಕಿ ಬೆಂಗಳೂರು(ಗ್ರಾಮಾಂತರ) ಜಿಲ್ಲೆಯಲ್ಲಿ ಪ.ಜಾತಿ, ಪ.ವರ್ಗ ಹೆಣ್ಣುಮಕ್ಕಳ ಮತ್ತು ಗಂಡುಮಕ್ಕಳ ವಿದ್ಯಾರ್ಥಿನಿಲಯಗಳ ತಾಲ್ಲೂಕುವಾರು ಮಾಹಿತಿ ನೀಡುವುದು.

ಇ) ಸರ್ಕಾರವು ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವಾಗ ಯಾವ ನೀತಿಯನ್ನು ಅನುಸರಿಸುತ್ತದೆ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):-

ಅ)	ಸಮಾಜ ಕಲ್ಯಾಣ	ಟಿಸಿಖಂ	ಶಿಕ್ಷಣ ಇಲಾಖೆ
1) ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿ ನಿಲಯಗಳು	104	69	18
2) ಪ್ರೀ-ಮೆಟ್ರಿಕ್ ವಿದ್ಯಾರ್ಥಿನಿಲಯಗಳು	705	706	-
3) ಅನುದಾನಿತ ವಿದ್ಯಾರ್ಥಿನಿಲಯಗಳು (ಪ್ರೀ- ಮೆಟ್ರಿಕ್)	270	—	—

4) ಅನುದಾನಿತ ವಿದ್ಯಾರ್ಥಿನಿಲಯಗಳು(ಪೋಸ್ಟ್-ಮೆಟ್ರಿಕ್) 11 — —

ಜಿಲ್ಲಾವಾರು ವಿವರಣೆಯನ್ನು ಅನುಬಂಧ-1, 2 ಮತ್ತು 3 ರಲ್ಲಿ ನೀಡಲಾಗಿದೆ.

ಆ) 1) ಪ್ರೀ-ಮೆಟ್ರಿಕ್ ವಿದ್ಯಾರ್ಥಿನಿಲಯಗಳು(ಗಂಡು ಮಕ್ಕಳ) 22 — —

(1,727ಗ.ಮ.)

2) ಪ್ರೀ-ಮೆಟ್ರಿಕ್ ಹೆಣ್ಣುಮಕ್ಕಳ ವಿದ್ಯಾರ್ಥಿನಿಲಯಗಳು 9 — —

(325ಹೆ.ಮ.)

(ವಿವರವನ್ನು ಅನುಬಂಧ 4 ರಲ್ಲಿ ನೀಡಿದೆ)

ಇ) ಹೊಸದಾಗಿ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವಾಗ ಈ ಕೆಳಕಂಡ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

ಸಮಾಜ ಕಲ್ಯಾಣ ಇಲಾಖೆ

1) 5 ರಿಂದ 10ನೇ ತರಗತಿಯಲ್ಲಿ ಓದುತ್ತಿರುವ ಪ.ಜಾತಿ ಪ.ವರ್ಗದ ವಿದ್ಯಾರ್ಥಿಗಳು 8 ಕಿ.ಮೀ. ಮೇಲ್ಪಟ್ಟು ದೂರದಿಂದ ಬರುವ ವಿದ್ಯಾರ್ಥಿಗಳು.
2) ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಜನಸಂಖ್ಯೆ ಹೆಚ್ಚಿಗೆ ಇರುವ ಕಡೆ.
3) ಕಟ್ಟಡ ಮಾಹೆಯಾನ ಅದ್ಯತೆ ಮೇಲೆ.
4) ಪ್ರೌಢಶಾಲೆ ಮತ್ತು ಮಾಧ್ಯಮಿಕ ಶಾಲೆಗಳು ಇರುವ ಕಡೆ.
5) ಅನುದಾನಿತ ವಿದ್ಯಾರ್ಥಿನಿಲಯಗಳಿಗೆ ಮಾನ್ಯತೆ ನೀಡಬೇಕಾದರೆ ಸಂಸ್ಥೆಯವರು 2 ವರ್ಷಗಳು ವಿದ್ಯಾರ್ಥಿನಿಲಯ ನಡೆಸಬೇಕು ಹಾಗೂ ಇದನ್ನು ಸರ್ಕಾರದ ಹಣಕಾಸಿನ ಲಭ್ಯತೆ ಮೇಲೆ ಪರಿಗಣಿಸಲಾಗುವುದು.

ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆ

ಜಿಲ್ಲೆ, ತಾಲ್ಲೂಕು ಮತ್ತು ಹೋಬಳಿಗಳಲ್ಲಿ ಇರುವ ವಿದ್ಯಾರ್ಥಿನಿಲಯಗಳಿಗೆ ಮಂಜೂರಾತಿ ನೀಡಲು ಅಲ್ಲಿನ ಹಿಂದುಳಿದ ವರ್ಗ ಮತ್ತು ಜನಸಂಖ್ಯೆಯನ್ನು ಆಧರಿಸಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಹಾಗೂ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಮತ್ತು ಸೌಕರ್ಯಗಳನ್ನು ಗಣನೆಗೆ ತೆಗೆದುಕೊಂಡು 5 ಕಿ.ಮೀ.ಅಂತರವನ್ನು ಪರಿಗಣಿಸಿ ಸ್ಥಳ ಪರಿಶೀಲನಾ ವರದಿ ಆಧಾರದ ಮೇಲೆ ಆಯವ್ಯಯದಲ್ಲಿ ಅಳವಡಿಸಿರುವ ಹಣಾವಕಾಶವನ್ನು ಗಣನೆಗೆ ತೆಗೆದುಕೊಂಡು ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಗುತ್ತಿದೆ.

ಅನುಬಂಧ-೧

ರಾಜ್ಯದಲ್ಲಿ 1991-92ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖಾವತಿಯಿಂದ ನಡೆಸುವ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಮೆಟ್ರಿಕ್‌ಪೂರ್ವ ಅನುದಾನಿತ ಮತ್ತು ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯಗಳ ಮಾಹಿತಿ.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳು				ಒಟ್ಟು		ಅನುದಾನಿತ ನಿಲಯಗಳು		ಮೆಟ್ರಿಕ್ ನಂತರದ ವಿದ್ಯಾರ್ಥಿ		ಖಾಸಗಿ ವಿದ್ಯಾಸಂಸ್ಥೆಗಳ ಮಾನ್ಯತೆ ಪಡೆದು ನಡೆಸುವ ಕಾಲೇಜು ಹಾಸ್ಟಲ್			
		ವಿದ್ಯಾರ್ಥಿ ನಿಲಯಗಳ ಸಂಖ್ಯೆ		ವಿದ್ಯಾರ್ಥಿಗಳ ಸಂಖ್ಯೆ		ವಿದ್ಯಾರ್ಥಿ ನಿಲಯಗಳು	ವಿದ್ಯಾರ್ಥಿಗಳ ಸಂಖ್ಯೆ	ವಿದ್ಯಾರ್ಥಿ ನಿಲಯಗಳು	ವಿದ್ಯಾರ್ಥಿಗಳ ಸಂಖ್ಯೆ	ವಿದ್ಯಾರ್ಥಿ ನಿಲಯಗಳ ಸಂಖ್ಯೆ	ವಿದ್ಯಾರ್ಥಿಗಳ ಸಂಖ್ಯೆ	ನಿಲಯಗಳ ಸಂಖ್ಯೆ		ವಿದ್ಯಾರ್ಥಿಗಳ ಸಂಖ್ಯೆ	
		ಬಾಲಕರು	ಬಾಲಕೀಯರು	ಬಾಲಕರು	ಬಾಲಕೀಯರು										
1.	ಬೆಂಗಳೂರು (ನಗರ)	21	5	1290	300	26	1590	12	918	5	1	775	75	–	–
2.	ಬೆಂಗಳೂರು (ಗ್ರಾ)	22	9	1400	620	31	2020	10	668	1	–	50	–	1	65
3.	ಚಿತ್ರದುರ್ಗ	28	10	1605	420	38	2025	62	13020	20	–	2450	–	3	142
4.	ಕೋಲಾರ	34	14	2133	516	48	2649	3	146	10	1	1025	50	–	–
5.	ತುಮಕೂರು	25	11	1553	515	36	2068	34	1518	20	–	1900	–	–	–
6.	ಶಿವಮೊಗ್ಗ	24	11	1351	410	35	1761	7	263	2	–	200	–	–	–
7.	ಮೈಸೂರು	36	14	2302	893	50	3195	12	901	7	1	930	75	2	225
8.	ಮಂಡ್ಯ	17	12	1157	595	29	1752	6	425	2	–	150	–	1	75
9.	ಹಾಸನ	25	9	1365	447	34	1812	10	381	2	–	135	–	–	–
10.	ಚಿಕ್ಕಮಗಳೂರು	16	8	995	370	24	1365	3	75	3	1	150	50	–	–
11.	ಕೂರ್ಗ್	14	8	779	322	22	1101	–	–	–	–	–	–	–	–
12.	ದಕ್ಷಿಣ ಕನ್ನಡ	24	12	1260	613	36	1873	–	–	1	–	40	–	–	–
13.	ಬೆಳಗಾಂ	20	11	993	367	31	1360	13	794	2	1	200	50	1	50
14.	ಬಿಜಾಪುರ	25	11	1041	560	36	1601	50	1938	2	–	200	–	–	–
15.	ಧಾರವಾಡ	36	16	1868	719	52	2587	17	997	1	1	100	75	2	150
16.	ಉತ್ತರ ಕನ್ನಡ	15	9	665	387	24	1002	1	25	–	–	–	–	–	–
17.	ಬೀದರ್	19	8	1597	464	27	2061	4	165	–	1	–	50	–	–
18.	ಗುಲ್ಬರ್ಗಾ	40	13	2848	580	53	3438	18	1267	16	1	1250	50	–	–
19.	ರಾಯಚೂರು	23	12	1240	480	35	1720	–	–	4	–	275	–	–	–
20.	ಬಳ್ಳಾರಿ	27	11	1694	465	38	2159	8	202	1	1	65	50	1	72
	ಒಟ್ಟು.....	491	214	29136	9993	705	39139	270	13643	99	9	9895	525	11	779

ಅನುಬಂಧ-೨

ಜಿಲ್ಲಾವಾರು ಪೋಷ್ಟಾರೆ

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ನಿಲಯಗಳ ವಿವರಗಳು
(ದಿನಾಂಕ 31-10-1991ಕ್ಕೆ ಅನ್ವಯಿಸುವಂತೆ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಸಂಖ್ಯೆ		ಮಂಜೂರಾತಿ ಸಂಖ್ಯೆ				ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸಂಖ್ಯೆ		ಮಂಜೂರಾತಿ ಸಂಖ್ಯೆ			
		ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು
1.	ಬೆಂಗಳೂರು (ನ)	11	2	13	581	100	681	3	1	4	150	50	200
2.	ಬೆಂಗಳೂರು (ಗ್ರಾ)	23	3	26	1100	160	1260	1	–	1	100	–	100
3.	ಬೆಳಗಾಂ	49	6	55	2103	258	2361	3	1	4	200	50	250
4.	ಬಳ್ಳಾರಿ	18	1	19	870	50	920	3	1	4	200	25	225
5.	ಬೀದರ್	25	1	26	1247	50	1297	1	1	2	100	25	125
6.	ಬಿಜಾಪುರ	42	1	43	2227	25	2252	3	1	4	260	50	310
7.	ಚಿಕ್ಕಮಗಳೂರು	23	3	26	1125	155	1280	1	1	2	100	50	150
8.	ಚಿತ್ರದುರ್ಗ	34	4	38	1650	175	1825	2	1	3	200	50	250
9.	ದಕ್ಷಿಣ ಕನ್ನಡ	33	3	36	1575	150	1725	4	2	6	275	110	385
10.	ಧಾರವಾಡ	56	5	61	2538	170	2708	3	2	5	200	75	275
11.	ಗುಲ್ಬರ್ಗಾ	60	2	62	2530	50	2580	1	1	2	100	25	125
12.	ಹಾಸನ	27	1	28	1280	50	1330	4	1	5	300	50	350
13.	ಕೊಡಗು	14	1	15	625	50	675	1	1	2	75	50	125
14.	ಕೋಲಾರ	35	4	39	1515	150	1665	4	1	5	250	50	300
15.	ಮಂಡ್ಯ	21	3	24	998	125	1123	2	1	3	175	50	225
16.	ಮೈಸೂರು	40	3	43	1802	150	1952	2	1	3	150	50	200
17.	ರಾಯಚೂರು	36	1	37	1738	50	1788	2	–	2	150	–	150
18.	ಶಿವಮೊಗ್ಗ	39	6	45	1785	270	2055	4	1	5	380	75	455
19.	ತುಮಕೂರು	29	3	32	375	135	1510	3	1	4	275	50	325
20.	ಉತ್ತರ ಕನ್ನಡ	34	4	38	1405	175	1580	1	2	3	100	75	175
	ಒಟ್ಟು...	649	57	706	30069	2498	32567	48	21	69	3740	960	4700

ಅನುಬಂಧ-3

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ವಿದ್ಯಾರ್ಥಿನಿಲಯಗಳ ವಿವರಗಳು

ಕ್ರಮ ಸಂಖ್ಯೆ	ವಿದ್ಯಾರ್ಥಿನಿಲಯದ ಹೆಸರು	ತಾಲ್ಲೂಕು	ಮಂಜೂರಾದ ಸಂಖ್ಯೆ	ಸೇರಿಸಿಕೊಂಡಿರುವ ಸಂಖ್ಯೆ
1	2	3	4	5
1.	ಬಾಲಕರ ವಿದ್ಯಾರ್ಥಿನಿಲಯ, ದೇವನಹಳ್ಳಿ	ದೇವನಹಳ್ಳಿ	90	80
2.	—"— ವಿಜಯಪುರ	—"—	35	45
3.	ಬಾಲಕಿಯರ ವಿದ್ಯಾರ್ಥಿನಿಲಯ, ದೇವನಹಳ್ಳಿ	-"—	50	50
4.	ಬಾಲಕರ ವಿದ್ಯಾರ್ಥಿನಿಲಯ, ಹೊಸಕೋಟೆ	ಹೊಸಕೋಟೆ	100	110
5.	ಬಾಲಕರ ವಿದ್ಯಾರ್ಥಿನಿಲಯ, ಸೂಲಿಬೆಲೆ	—"—	50	65
6.	ಬಾಲಕಿಯರ ವಿದ್ಯಾರ್ಥಿನಿಲಯ, ಹೊಸಕೋಟೆ	—"—	50	50
7.	ಬಾಲಕರ ವಿದ್ಯಾರ್ಥಿನಿಲಯ, ಚನ್ನಪಟ್ಟಣ	ಚನ್ನಪಟ್ಟಣ	90	105
8.	ಬಾಲಕರ ವಿದ್ಯಾರ್ಥಿನಿಲಯ, ನಾಗವಾರ	—"—	50	50
9.	—"— ಕೋಡಂಬಳ್ಳಿ	—"—	50	55
10.	—"— ಮತ್ತಿಕೆರೆ	-"-	50	50
11.	ಬಾಲಕಿಯರ ವಿದ್ಯಾರ್ಥಿನಿಲಯ, ಚನ್ನಪಟ್ಟಣ	—"—	40	40
12.	ಬಾಲಕಿಯರ ವಿದ್ಯಾರ್ಥಿನಿಲಯ, ಶೆಟ್ಟಿಹಳ್ಳಿ	—"—	25	25
13.	ಬಾಲಕರ ವಿದ್ಯಾರ್ಥಿನಿಲಯ, ತ್ಯಾಮಗೊಂಡ್ಲು	ನೆಲಮಂಗಲ	85	85
14.	ಬಾಲಕರ ವಿದ್ಯಾರ್ಥಿನಿಲಯ, ನೆಲಮಂಗಲ	—	50	50
15.	ಬಾಲಕಿಯರ ವಿದ್ಯಾರ್ಥಿನಿಲಯ, ನೆಲಮಂಗಲ	—"—	50	50
16.	ಬಾಲಕರ ವಿದ್ಯಾರ್ಥಿನಿಲಯ, ಜಾಲಮಂಗಲ	ರಾಮನಗರ	80	95
17.	ಬಾಲಕರ ವಿದ್ಯಾರ್ಥಿನಿಲಯ, ರಾಮನಗರ	—"—	50	50
18.	ಬಾಲಕಿಯರ ವಿದ್ಯಾರ್ಥಿನಿಲಯ, ರಾಮನಗರ	—"—	25	25
19.	ಬಾಲಕರ ವಿದ್ಯಾರ್ಥಿನಿಲಯ, ಮಾಗಡಿ	ಮಾಗಡಿ	165	65
20.	ಬಾಲಕರ ವಿದ್ಯಾರ್ಥಿನಿಲಯ, ಕುದೂರು	—"—	50	50
21.	ಬಾಲಕರ ವಿದ್ಯಾರ್ಥಿನಿಲಯ, ಗುಡೇಮಾರನಹಳ್ಳಿ	—"—	25	25
22.	ಬಾಲಕರ ವಿದ್ಯಾರ್ಥಿನಿಲಯ, ಬಾಳೇನಹಳ್ಳಿ	—"—	25	25
23.	ಬಾಲಕಿಯರ ವಿದ್ಯಾರ್ಥಿನಿಲಯ, ಮಾಗಡಿ	ಮಾಗಡಿ	65	50
24.	ಬಾಲಕರ ವಿದ್ಯಾರ್ಥಿನಿಲಯ, ಹಾರೋಹಳ್ಳಿ	ಕನಕಪುರ	110	110
25.	ಬಾಲಕರ ವಿದ್ಯಾರ್ಥಿನಿಲಯ, ಹೊಸದುರ್ಗ	ಕನಕಪುರ	100	100
26.	ಬಾಲಕರ ವಿದ್ಯಾರ್ಥಿನಿಲಯ, ಸಾತನೂರು	—"—	50	50
27.	ಬಾಲಕರ ವಿದ್ಯಾರ್ಥಿನಿಲಯ, ಕನಕಪುರ	—"—	50	65
28.	ಬಾಲಕರ ವಿದ್ಯಾರ್ಥಿನಿಲಯ, ಹೊಸಕಬ್ಬಾಳು	—"—	25	25
29.	ಬಾಲಕಿಯರ ವಿದ್ಯಾರ್ಥಿನಿಲಯ, ಕನಕಪುರ	—"—	75	75
30.	ಬಾಲಕರ ವಿದ್ಯಾರ್ಥಿನಿಲಯ, ದೊಡ್ಡಬಳ್ಳಾಪುರ	ದೊಡ್ಡಬಳ್ಳಾಪುರ	200	200
31.	ಬಾಲಕಿಯರ ವಿದ್ಯಾರ್ಥಿನಿಲಯ, ಡಿ.ಬಿ.ಪುರ	ದೊಡ್ಡಬಳ್ಳಾಪುರ	40	40
32.	ಪರಿಶಿಷ್ಟ ವರ್ಗದ ಬಾಲಕರ ವಿದ್ಯಾರ್ಥಿನಿಲಯ,	ರಾಮನಗರ ರಾಮನಗರ	75	75
ಕಾಲೇಜು ವಿದ್ಯಾರ್ಥಿನಿಲಯಗಳು				
1.	ಕಾಲೇಜು ಬಾಲಕರ ವಿದ್ಯಾರ್ಥಿನಿಲಯ,	ಹೊಸಕೋಟೆ	50	50

ಟಿಪ್ಪಣಿ

ಬಾಲಕರ ವಿದ್ಯಾರ್ಥಿನಿಲಯ, ಮಾಗಡಿ ಮತ್ತು ದೇವನಹಳ್ಳಿ ಈ 2 ನಿಲಯಗಳಲ್ಲಿ ಮಂಜೂರಾತಿ ಸಂಖ್ಯೆ ಎಷ್ಟು ವಿದ್ಯಾರ್ಥಿಗಳು ದಾಖಲಾಗದ ಕಾರಣ ಸದರಿ ವಿದ್ಯಾರ್ಥಿನಿಲಯಗಳಲ್ಲಿ ಉಳಿಕೆಯಾದ ಸ್ಥಾನಗಳನ್ನು ಇದೇ

ಜಿಲ್ಲೆಯ ಬೇಡಿಕೆ ಹೆಚ್ಚಾಗಿರುವ ಕೆಲವು ವಿದ್ಯಾರ್ಥಿನಿಲಯಗಳಿಗೆ 1991-92ನೇ ಸಾಲಿಗೆ ಅನ್ವಯವಾಗುವಂತೆ ಮಾತ್ರ ಜಿಲ್ಲಾ ಪರಿಷತ್ ಆದೇಶ ದಂತೆ ಮರು ಹೊಂದಾಣಿಕೆ ಮಾಡಿಕೊಳ್ಳಲಾಗಿದೆ. ಆದುದರಿಂದ ಕೆಲವು ವಿದ್ಯಾರ್ಥಿನಿಲಯಗಳಲ್ಲಿ ಮಂಜೂರಾತಿ ಸಂಖ್ಯೆಗಿಂತ ದಾಖಲಾತಿ ಸಂಖ್ಯೆ ಹೆಚ್ಚಾಗಿದೆ.

ಅನುದಾನಿತ ವಿದ್ಯಾರ್ಥಿನಿಲಯಗಳ ಪಟ್ಟಿ:

1	2	3	4	5
1.	ದಯಾನಂದ ವಿದ್ಯಾರ್ಥಿನಿಲಯ,	ನೆಲಮಂಗಲ ತಾಲ್ಲೂಕು.	72	21
2.	ಶ್ರೀ ಸಿದ್ಧಾರ್ಥ ಸಾರ್ವಜನಿಕ ವಿದ್ಯಾರ್ಥಿನಿಲಯ,	ಚಿಕ್ಕಮಸ್ಕಲ್, ಮಾಗಡಿ ತಾಲ್ಲೂಕು	30	30
3.	ಸ್ವಾಮಿ ವಿವೇಕಾನಂದ ಸಾರ್ವಜನಿಕ ವಿದ್ಯಾರ್ಥಿನಿಲಯ,	ಮೋಟಗಾನಹಳ್ಳಿ, ಮಾಗಡಿ ತಾಲ್ಲೂಕು	40	37
4.	ಶ್ರೀ ರಂಗನಾಥ ಜನರಲ್ ಹಾಸ್ಟಲ್,	ಮಲೋಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು	99	62
5.	ಸತೀಶ್ಚಂದ್ರ ಸ್ಮಾರಕ ವಿದ್ಯಾರ್ಥಿನಿಲಯ,	ಕೋರಿಗೆರೆ, ದೊಡ್ಡಬಳ್ಳಾಪುರ ತಾಲ್ಲೂಕು	100	56
6.	ಗ್ರಾಮ ಸೇವಾಶ್ರಮ ವಿದ್ಯಾರ್ಥಿನಿಲಯ,	ರಾಮೋಹಳ್ಳಿ ರಾಮನಗರ ತಾಲ್ಲೂಕು	35	35
7.	ಬುದ್ಧ ದೇವ ವಿದ್ಯಾರ್ಥಿನಿಲಯ,	ಕನಕಪುರ	100	70
8.	ಶಿವಯೋಗಿ ಮುನೇಶ್ವರ ಸ್ವಾಮಿ ವಿದ್ಯಾರ್ಥಿನಿಲಯ,	ಮರಳಗವಿ ಮಠ, ಕನಕಪುರ ತಾಲ್ಲೂಕು.	148	67
9.	ವಿಶ್ವೋದಯ ವಿದ್ಯಾಸಂಸ್ಥೆ ವಿದ್ಯಾರ್ಥಿನಿಲಯ,	ಕೃಷ್ಣಯ್ಯನ ದೊಡ್ಡಿ, ಕನಕಪುರ ತಾಲ್ಲೂಕು.	35	35

ಅನುಬಂಧ-4

ವಿಧಾನ ಸಭೆಯ ಸದಸ್ಯರಾದ ಶ್ರೀ ಸಾದತ್ ಅಲಿಖಾನ್ ಇವರ ಪ್ರಶ್ನೆ ಸಂಖ್ಯೆ : 583.

ಜಿಲ್ಲೆಗಳ ಹೆಸರು	ವಿದ್ಯಾರ್ಥಿ ನಿಲಯಗಳ ಸಂಖ್ಯೆ
ಬೆಂಗಳೂರು	5
ತುಮಕೂರು	2
ಮೈಸೂರು	2
ಹಾಸನ	1
ಚಿಕ್ಕಮಗಳೂರು	1
ಚಿತ್ರದುರ್ಗ	2
ಶಿವಮೊಗ್ಗ	1
ಮಡಕೇರಿ	2
ಗುಲ್ಬರ್ಗಾ	1
ಬೀದರ್	1

ಶ್ರೀ ಸಾದತ್ ಅಲಿ ಖಾನ್:- ಮಾನ್ಯ ಅಧ್ಯಕ್ಷರೇ ನನ್ನ ಕ್ವಶ್ಚನ್ ' the total number of hostels at the College, High School and Middle School level in the State (Districtwise details may be furnished) ಎಂದಿರುವುದಕ್ಕೆ

The answer to the above questions is, they have given metric hostels-108.....

ಮತ್ತೆ ಗ್ರಾಂಟ್-ಇನ್-ಏಡ್ ಹಾಸ್ಟಲ್ಸ್, ಪ್ರೀ ಮೆಟ್ರಿಕ್ 270. ಬ್ಯಾಕ್‌ವರ್ಡ್ ಕ್ಯಾಸ್ಟ್ ಮತ್ತು ಮೈನಾರೀಟೀಸ್‌ಗೆ ಒಂದೂ ಕೊಟ್ಟಿಲ್ಲ ಸ್ಟೇಟ್‌ನಲ್ಲಿ, ಅದೇ ರೀತಿ, Pre-metrict hostels 705... Grant-in-aid hostels-3, Metric hostels 217 whereas for Backward classes and Minorities...ಅದು ಒಂದೂ ಇಲ್ಲ, ಎಜುಕೇಶನ್ ಡಿಪಾರ್ಟ್‌ಮೆಂಟ್‌ನಲ್ಲಿ ಮತ್ತು ಸಮಾಜ ಕಲ್ಯಾಣ ಇಲಾಖೆಯಲ್ಲಿ ಅದಕ್ಕೆ ನನ್ನ question, why Grant-in-aid Hostels for Backward Classes and minorities has not been sanctioned as also Post-mertic and Pre-metric Hostels has not been sanctioned. Second, whether Government has any pending proposals to sanction Grant-in-aid and other hostels for Backward classes and minorities.

Thirdly, how many private management hostels applied for recognition in the State and out of that how many belonging to Backward classes and minorities?

ಶ್ರೀ ಬಿ. ಶಿವಣ್ಣ:- ಮಾನ್ಯ ಅಧ್ಯಕ್ಷರೇ ಷೆಡ್ಯೂಲ್‌ಕ್ಯಾಸ್ಟ್ ಬಗ್ಗೆ ಹೇಳಿದ್ದಾರೆ. ನಮ್ಮ ಗ್ರಾಂಟ್-ಇನ್-ಏಡ್ ಹಾಸ್ಟಲ್ಸ್ 270ಇವೆ. ಪ್ರೀ ಮೆಟ್ರಿಕ್ ಮತ್ತು ಪೋಸ್ಟ್ ಮೆಟ್ರಿಕ್ ಹಾಸ್ಟಲ್ಸ್ ಬ್ಯಾಕ್‌ವರ್ಡ್ ಕ್ಯಾಸ್ಟ್ ಮತ್ತು ಮೈನಾರಿಟೀಸ್‌ಗೆ ಯಾರಾದರೂ ನಾವು ಗ್ರಾಂಟಿನೈಡ್ ಹಾಸ್ಟಲ್ಸ್ ಒಪನ್ ಮಾಡಬೇಕು ಎಂದು ಬಂದರೆ ಅವರಿಗೆ ರೂಲ್ಸ್ ಪ್ರಕಾರ ಗ್ರಾಂಟ್ ಮಾಡಬಹುದು.

ಶ್ರೀ ಸಾದತ್ ಆಲಿ ಖಾನ್:- ಅಪ್ಲಿಕೇಶನ್ ಬರಲಿಲ್ಲಪೇ?

ಶ್ರೀ ಬಿ. ಶಿವಣ್ಣ:- ಅರ್ಜಿ ಬಂದಿವೆ. ಅವು ಪರಿಶೀಲನೆಯಲ್ಲಿವೆ.

MR. SPEAKER:- It is being considered..

ಶ್ರೀ ಸಾದತ್ ಆಲಿ ಖಾನ್ :- ಅರ್ಜಿ ಬಂದರೂ ಒಂದೂ ಕೊಟ್ಟಿಲ್ಲವೇ?

ಶ್ರೀ ಬಿ. ಶಿವಣ್ಣ:- ಈ ಸಾರಿ ಕೊಡುತ್ತೇವೆ. BCM Hostel for Girls 20. 50 ಪೋಸ್ಟ್ ಮೆಟ್ರಿಕ್ ಹಾಸ್ಟಲ್ಸ್ ಮಂಜೂರು ಮಾಡುತ್ತೇವೆ. ಕಂಡೀಷನ್ಸ್ ಮತ್ತು ರೂಲ್ಸ್ ಪ್ರಕಾರ ಕೊಡಬೇಕಾಗುತ್ತದೆ. ಅರ್ಜಿಗಳು ಬಂದಿದ್ದರೆ ಅವರಿಗೆ ಈ ವರ್ಷ ಸಹಾಯ ಮಾಡುತ್ತೇವೆ.

ದಕ್ಷಿಣ ಕನ್ನಡದಲ್ಲಿ ಸಣ್ಣ ಕೈಗಾರಿಕೆಗಳು

98 (55) ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):- ಮಾನ್ಯ ಸಣ್ಣ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ದಕ್ಷಿಣ ಕನ್ನಡದಲ್ಲಿ ಸಣ್ಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲು ಈವರೆಗೆ ಎಷ್ಟು ಶೆಡ್ಡುಗಳನ್ನು ನಿರ್ಮಿಸಲಾಗಿದೆ, ಹಾಗೂ ಅವು ಎಲ್ಲೆಲ್ಲಿವೆ?

ಆ) ಇದಕ್ಕಾಗಿ ಎಷ್ಟು ಎಕರೆ ಜಮೀನು ನೀಡಲಾಗಿದೆ?

ಇ) 1991 ನೇ ಡಿಸೆಂಬರ್ ಅಖೈರುವರೆಗೆ ಎಷ್ಟು ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲಾಗಿದೆ ಹಾಗೂ ಎಷ್ಟು ಬಂಡವಾಳ ಒದಗಿಸಿಕೊಡಲಾಗಿದೆ. (ಈ ರೀತಿ ಒದಗಿಸಿಕೊಟ್ಟವರ ವಿವರ ನೀಡುವುದು)

ಈ) ಇದರಿಂದಾಗಿ ಎಷ್ಟು ಜನರಿಗೆ ಉದ್ಯೋಗದ ಅವಕಾಶ ದೊರೆಯುತ್ತದೆ.

ಶ್ರೀ ನಜೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು):-

ಅ) 267 ಶೆಡ್ಡುಗಳು.

ಬೈಕಂಪಾಡಿ, ಯಯ್ಯಾಡಿ, ಮಣಿಪಾಲ, ಮೂಡಬಿದ್ರೆ, ಕಾರ್ಕಳ ಹಾಗೂ ಕೋಟೇಶ್ವರಗಳಲ್ಲಿವೆ.

ಆ) 92.17 ಎಕರೆ.